ಇ) 37 ಹುದ್ದೆಗಳು

ಈ) ಸುಮಾರು ಎರಡು ವರ್ಷಗಳಿಂದ ಖಾಲಿ ಉಳಿದಿವೆ.

ಉ) ಇಲಾಖಾ ನೇಮಕಾತಿ ಸಮಿತಿಯು ರಚನೆಯಾದ ಕೂಡಲೇ ಮೇಲಿನ ಹುದ್ದೆಗಳನ್ನು ಭರ್ತಿ ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಆಕ್ಷೇಪಣಾ ರಹಿತ ಪ್ರಮಾಣ ಪತ್ರ ನೀಡಿಕೆ

345 (1731): ಶ್ರೀ ಎಸ್.ಜಿ.ನಂಜಪ್ಪ (ಶ್ರವಣಬೆಳಗೊಳ):-

ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೇ ?

ಅ) ಪಟ್ಟಣ ಪ್ರದೇಶಗಳಲ್ಲಿ 2ಗುಂಟೆ ಅಥವಾ ಅದಕ್ಕಿಂತಾ ಕಡಿಮೆ ಪ್ರದೇಶವನ್ನು ಅನ್ಯ ಸಂಕ್ರಮಣ ಮಾಡಲು ಟೌನ್ ಪ್ಲಾನಿಂಗ್‌ನಿಂದ ಎನ್.ಓ.ಸಿ. ಕೊಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) 2ಗುಂಟೆ ಪ್ರದೇಶವುಳ್ಳ ಬಡ ಜನರಿಗೆ ಮನೆ ಕಟ್ಟಿಕೊಳ್ಳಲು ಇದರಿಂದ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಅವರಿಗೆ ತೊಂದರೆಯಾಗದಿರಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):-

ಅ) ಇಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಜಿಲ್ಲಾಪರಿಷತ್ತುಗಳಿಂದ ಸ್ಥಾಪಿಸಲ್ಪಟ್ಟ ವಿದ್ಯಾರ್ಥಿನಿಲಯಗಳು

347 (1612):- ಶ್ರೀ ಎಂ. ಶ್ರೀನಿವಾಸಯ್ಯ (ಟಿ.ನರಸೀಪುರ):-

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೇ ?

ಅ) ಜಿಲ್ಲಾ ಪರಿಷತ್‌ಗಳು ಅಸ್ತಿತ್ವಕ್ಕೆ ಬಂದ ಮೇಲೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳನ್ನು ಮತ್ತು ವಸತಿಶಾಲೆಗಳನ್ನು ಪ್ರಾರಂಭಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ರೀತಿ ಹೊಸದಾಗಿ ಪ್ರಾರಂಭ ಮಾಡಿರುವ ಸಂಸ್ಥೆಗಳಿಗೆ ಸರ್ಕಾರದಿಂದ ಕಟ್ಟಡ ವರ್ಗದ ಮಂಜೂರಾತಿ ನೀಡಲಾಗಿದೆಯೇ ?

ಇ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):-

ಅ) ಹೌದು.

ಆ) ಸರ್ಕಾರದಿಂದ ಮಂಜೂರು ಮಾಡಿ ಪ್ರಾರಂಭಿಸಲಾಗಿರುವ ಎಲ್ಲಾ ವಿದ್ಯಾರ್ಥಿನಿಲಯಗಳಿಗೂ ಕಟ್ಟಡ ವರ್ಗವನ್ನು ಮಂಜೂರು ಮಾಡಲಾಗುವುದು. ಸರ್ಕಾರದ ಮಂಜೂರಾತಿಯಿಲ್ಲದೆ